Rehabilitation of Expropriated Ryots of Manchanabele Project Area

39. Sri C. R. RANGE GOWDA (Magadi).—

Will the Chief Minister be pleased to state:—

(*a*) the arrangements made to rehabilitate the expropriated ryots that come under Manchanabele Project area in Magadi Taluk;

(*b*) whether any officers have been appointed for the purpose;

(*c*) if not, when do they propose to appoint?

Sri VEERENDRA PATIL (Chief Minister).—

(*a*) Necessary action to rehabilitate the affected persons will be taken up along with the project works.

(*b*) and (*c*) Does not arise in view of reply to (*a*).

ಶ್ರೀ ಸಿ. ಆರ್. ರಂಗೇಗೌಡ. ಸ್ವಾಮಿ ಮಂಚನಬೆಲೆ ಯೋಜನೆಯಿಂದ ಜಮೀನು ಕಳೆದು ಕೊಳ್ಳುವವರಿಗೆ ಪುನರ್ವಸತಿಗೊಳಿಸುವ ಬಗ್ಗೆ ಅವಶ್ಯಕ ಕ್ರಮವನ್ನು ಯೋಜನಾಕಾರ್ಯ ದೊಡನೆಯೇ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ, ಮತ್ತು ತಾವು ಈ ಯೋಜನೆಗೆ ಅಸ್ತಿಭಾರ ಶಿಲೆಯನ್ನು ಹಾಕಿದಾಗ 6 ತಿಂಗಳಲ್ಲಿ ಅಲ್ಲಿ ಜಮೀನುಕಳೆದುಕೊಂಡ ರೈತರಿಗೆ ಜಮೀನು ಕೊಡುತ್ತೇವೆಂದು ಹೇಳಿದ್ದೀರಿ ಹಾಗಾದರೆ ಈಗಾಗಲೇ ತಾವು ಈ ಬಗ್ಗೆ ಏನೇನು ಕಾರ್ಯಕ್ರಮ ವನ್ನು ಕೈಗೊಂಡಿದ್ದೀರಿ, ಮತ್ತು ಯಾವ ಸ್ಥಳವನ್ನು ಆಯ್ಕೆಮಾಡಿದ್ದೀರಿ?

†ಶ್ರೀ ವೀರೇಂದ್ರ ಪಾಟೀಲ್.—6 ತಿಂಗಳಲ್ಲಿ ಅಲ್ಲ ಜಮೀನು ಮುಳುಗಡೆಯಾದವರಿಗೆ ಜಮೀನು ಕೊಡುತ್ತೇವೆಂದು ನಾನು ಭರವಸೆಯನ್ನು ಕೊಡಲಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸರ್ಕಾರದ ಪಾಲಿಸಿ ಪ್ರಕಾರ ಯಾವುದೇ ಪ್ರಾಜೆಕ್ಟುಗಳನ್ನು ಕಟ್ಟುವಾಗ ಯಾರಿಗೆ ಅನಾನುಕೂಲವಾಗುತ್ತದೆ, ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಪುನರ್ವಸತಿ ಗೊಳಿಸುವ ಬಗ್ಗೆ ಯೋಜನೆಗಳನ್ನು ಇಟ್ಟುಕೊಂಡಿದೆ. ಪ್ರಾಜೆಕ್ಟು ಕಟ್ಟುವಾಗ ಯಾರಿಗೆ ತೊಂದರೆಯಾಗುತ್ತದೆ, ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಅನುಕೂಲ ಮಾಡುವುದಕ್ಕೆ ಅವರಿಗೆ ಪುನರ್ವಸತಿ ಒದಗಿಸುವುದಕ್ಕೆ ಯೋಜನೆಯ ಪ್ರಕಾರ ಕೆಲಸಗಳನ್ನು ಸರ್ಕಾರದವರು ಮಾಡುತ್ತಾರೆ. ಈಗ ಆ ಯೋಜನೆಯ ಶಂಕು ಸ್ಥಾಪನೆಯನ್ನು ಮಾಡಿದೆ. ಮುಂದೆ ಆ ಯೋಜನೆಗೆ ಸಂಬಂಧಪಟ್ಟಹಾಗೆ ಟೆಂಡರ್ ಕರ್‌ಘಾರ ಮಾಡಿ ಏಜೆನ್ಸಿಯನ್ನು ಫಿಕ್ಸ್ ಮಾಡಲಾಗುತ್ತದೆ. ಪ್ರಾಜೆಕ್ಟ್ ಕೆಲಸ ಪ್ರಾರಂಭ ಆದಮೇಲೆ ಅದರ ಪ್ರೋಗ್ರೆಸ್ ಆದಮೇಲೆ ಪುನರ್ವಸತಿಯ ಕೆಲಸವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಪುನರ್ವಸತಿಯ ಕೆಲಸವನ್ನು ಜಾಗ್ರತೆಯಾಗಿ ತೆಗೆದು ಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಮಾಗಡಿ ತಾಲ್ಲೂಕಿನಲ್ಲಿ ತಿಪ್ಪಗೊಂಡನಹಳ್ಳಿ ಕೆರೆಯನ್ನು ಕಟ್ಟಿ ಬೆಂಗಳೂರು ನಗರಕ್ಕೆ ನೀರು ಒದಗಿಸಿದಿರಿ, ಆದರೆ ಅಲ್ಲಿ ಜಮೀನು ಕಳೆದುಕೊಂಡವರಿಗೆ ಜಮೀನು ಕೊಡಲಿಲ್ಲ. ಕಣ್ವಾ ರಿಜರ್ವಾಯರ್ ಕಟ್ಟಿದಿರಿ ಅದರಲ್ಲಿ ಜಮೀನು ಕಳೆದುಕೊಂಡವರಿಗೆ ಮತ್ತೆ ಜಮೀನು ಕೊಡಲಿಲ್ಲ. ಈ ಕೆರೆಗಳನ್ನು ಕಟ್ಟಿ ಸುಮಾರು 24—25 ವರ್ಷಗಳಾದರೂ ಅಲ್ಲ ಜಮೀನು ಕಳೆದುಕೊಂಡ ರೈತರಿಗೆ ಜಮೀನು ಕೊಟ್ಟಿಲ್ಲ. ಇದರಿಂದಾಗಿ ಅಲ್ಲಿನ ಜನರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅವರು ಜಮೀನು ಇಲ್ಲದೆ ನಾಯಿಗಳಂತೆ ಅಲೆಯು ತ್ತಿದ್ದಾರೆ. ಆದ್ದರಿಂದ ಈ ಪ್ರಾಜೆಕ್ಟುಗಳಲ್ಲಿ ಜಮೀನು ಮುಳುಗಡೆಯಾಗಿರುವ ರೈತರಿಗೆ ಜಾಗ್ರತೆಯಾಗಿ ಜಮೀನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯಸದಸ್ಯರು ಹೇಳುವ ಮಾತನ್ನು ನಾನು ಒಪ್ಪುತ್ತೇನೆ. ತಿಪ್ಪಗೊಂಡನಹಳ್ಳಿ ಮತ್ತು ಕಣ್ವಾ ಪ್ರಾಜೆಕ್ಟುಗಳಲ್ಲಿ ಜಮೀನು ಕಳೆದುಕೊಂಡವರಿಗೆ ಅನುಕೂಲ ಮಾಡುವುದಕ್ಕೆ ಆಗಿಲ್ಲ. ಎಲ್ಲ ಪ್ರಾಜೆಕ್ಟುಗಳು, ಸಣ್ಣಪುಟ್ಟ ಅಣೆಕಟ್ಟುಗಳು, ಇರಿಗೇಷನ್ ಟ್ಯಾಂಕುಗಳು ಇವುಗಳನ್ನು ಕಟ್ಟುತ್ತೇವೆ ಅಲ್ಲಿ ಜಮೀನು ಕಳೆದುಕೊಂಡವರಿಗೆ ಮತ್ತೆ ಜಮೀನು ಕೊಡುವುದಕ್ಕೆ ಕೆಲವು ಅಡ್ಡಿ ಆತಂಕಗಳು ಇವೆ. ಎಲ್ಲಿ ಯಾವ ಪ್ರಾಜೆಕ್ಟುಗಳನ್ನು ಕಟ್ಟಿದರೂ ಸಹ ಅದರಲ್ಲಿ ಮುಳುಗಡೆಯಾದ ಜಮೀನಿನ ಮಾಲೀಕರಿಗೆ, ರೈತರಿಗೆ ಕಾಂಪೆನ್‌ಸೇಷನ್

(ಶ್ರೀ ವೀರೇಂದ್ರ ಪಾಟೀಲ್)

ಕೊಡುತ್ತೇವೆ. ಅಲ್ಲಿಯೇ ಸುತ್ತಮುತ್ತಲಿನ ಪ್ರದೇಶದಲ್ಲಿ ಸರ್ಕಾರದ ಭೂಮಿ ಇದ್ದರೆ ಅದನ್ನು ಅವರಿಗೆ ಕೊಡುತ್ತೇವೆ. ಆ ಪ್ರದೇಶದಲ್ಲಿ ಸರ್ಕಾರದ ಭೂಮಿ ಯಾವುದೂ ಇಲ್ಲದಿದ್ದರೆ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಪ್ರಾಜೆಕ್ಟಿನಲ್ಲಿ ಭೂಮಿಯನ್ನು ಕಳೆದುಕೊಂಡಿರತಕ್ಕವರಿಗೆ ಸಂಬಂಧಪಟ್ಟಹಾಗೆ ಎಲ್ಲಿ ಭೂಮಿ ಸಿಕ್ಕುತ್ತದೆ ಎಂಬುದನ್ನು ವಿಚಾರ ಮಾಡಿ ಅಲ್ಲಿ ಭೂಮಿ ಇದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಾಜೆಕ್ಟಿಗೆ ಅವಶ್ಯಕವಾಗಿ ಬೇಕಾದಂತಹ ಸರಿಯಾದ ಸ್ಥಳ ಇನ್ನೂ ಸಿಕ್ಕದೇ ಇರುವಾಗ ಯಾರೋ ಒಬ್ಬರು ದೊಡ್ಡಮನುಷ್ಯರಿಗೆ ಗೌರವ ಕೊಡುವ ದೃಷ್ಟಿಯಿಂದ ಅತುರ ಅತುರವಾಗಿ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಮಾನ್ಯ ಸದಸ್ಯರಿಗೆ ಈ ವಿಚಾರ ಗೊತ್ತಿರಬಹುದು. ಏತಕ್ಕೆಂದರೆ ಅವರು 1952 ನೇ ಇನಪಿಯಿಂದ ಈ ಸಭೆಯ ಸದಸ್ಯರಾಗಿದ್ದಾರೆ. ಮಂಚಿನಬೆಲೆ ಪ್ರಾಜೆಕ್ಟ್ ಆಗಬೇಕೆಂದು ಆ ಭಾಗದ ಜನತೆ ಅನೇಕವರ್ಷಗಳಿಂದ ಕೇಳುತ್ತಿದ್ದರು. ಅದಕೊಸ್ಕರ ಆ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕಾಗಿ ಬಂತು. ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ಅಲ್ಲಿಗೆ ಬಂದು ಆ ಸ್ಥಳ ಪರಿಶೀಲನೆ ಮಾಡಿ ಆ ಸ್ಥಳದಲ್ಲಿ ಕಟ್ಟಬೇಕು ಎಂದು ಅವರು ಹೇಳಿದರು. ಆ ನಂತರ ಆ ಸ್ಥಳವನ್ನು ಪರಿಶೀಲನೆ ಮಾಡಿ, ಸರ್ವೆ ಮಾಡಿ ಆ ಪ್ರಾಜೆಕ್ಟಿನ ಪ್ಲಾನು ಮತ್ತು ಎಸ್ಟಿಮೇಟು ತಯಾರು ಮಾಡಿ ಅದರಬಗ್ಗೆ ರಿಪೋರ್ಟ್ ತಯಾರು ಮಾಡಿ ಅದಕ್ಕೆ ಕೇಂದ್ರ ಸರ್ಕಾರದ ಮನ್ನಣೆ ಪಡೆದಮೇಲೆ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಹಣ ಕೊಟ್ಟಮೇಲೆ ಆ ಯೋಜನೆಗೆ ಫೌಂಡೇಷನ್ ಸ್ಟೋನ್ ಹಾಕಿದೆ. ಅದನ್ನು ಅತುರಅತುರವಾಗಿಯೇನೂ ಮಾಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಾಜೆಕ್ಟನ್ನು ಕಟ್ಟುವ ಸ್ಥಳ ಇಂಜಿನಿಯರಿಂದ ಇನ್ನೂ ನಿರ್ದಿಷ್ಟವಾಗಿ ತೀರ್ಮಾನವಾಗದೇ ಇರುವಾಗ ಆ ಪ್ರಾಜೆಕ್ಟಿಗೆ ಫೌಂಡೇಷನ್ ಸ್ಟೋನ್ ಹಾಕುವ ಅತುರ ಏನಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಫೌಂಡೇಷನ್ ಸ್ಟೋನ್ ಹಾಕುವುದಾದ್ದು ಯಾವ ಸ್ಥಳದಲ್ಲಿ ಯಾವ ಪ್ರಾಜೆಕ್ಟನ್ನು ಕಟ್ಟುತ್ತೇವೆಯೋ ಆ ಪ್ರಾಜೆಕ್ಟಿನ ಒಂದು ಸಂಕೇತದ ಸಲುವಾಗಿ ಫೌಂಡೇಷನ್ ಸ್ಟೋನ್ ಹಾಕುತ್ತೇವೆ ಅಲ್ಲಿ ಒಂದು ಸಮಾರಂಭವನ್ನು ಮಾಡುತ್ತೇವೆ. ಆದರೆ ನಾವು ಫೌಂಡೇಷನ್ ಕಲ್ಲು ಎಲ್ಲಿ ಇಡುತ್ತೇವೆಯೋ ಅಲ್ಲಿಯೇ ಪ್ರಾಜೆಕ್ಟನ್ನು ಕಟ್ಟಬೇಕೆಂದು ಅಲ್ಲ. ಆ ಪ್ರದೇಶದಲ್ಲಿ ಅನುಕೂಲವಾದ ಒಂದು ಸ್ಥಳದಲ್ಲಿ ಪ್ರಾಜೆಕ್ಟನ್ನು ಕಟ್ಟಬೇಕಾಗುತ್ತದೆ. ಆ ಪ್ರಾಜೆಕ್ಟನ್ನು ಎಲ್ಲಿ ಕಟ್ಟಬೇಕು ಎನ್ನುವ ಬಗ್ಗೆ ಮೊದಲು ವಿವಾದವಿತ್ತು. ಆದರೆ ಡಾ. ಕೆ. ಎಲ್. ರಾವ್ ಅವರು ಸ್ಥಳ ಪರಿಶೀಲನೆ ಮಾಡಿ ಯಾವ ಸ್ಥಳದಲ್ಲಿ ಅದನ್ನು ಕಟ್ಟಬೇಕೆಂದು ಹೇಳಿದ್ದಾರೆಯೋ ಆ ಸ್ಥಳವನ್ನು ಸರ್ವೆ ಮಾಡಿ ಅದಕ್ಕೆ ಪ್ಲಾನು ಮತ್ತು ಎಸ್ಟಿಮೇಟನ್ನು ತಯಾರು ಮಾಡಿ ಅದನ್ನು ಅಪ್ರೂವ್ ಮಾಡಿ ಅಲ್ಲಿ ಫೌಂಡೇಷನ್ ಸ್ಟೋನ್ ಹಾಕಿದೆ.

ಅಧ್ಯಕ್ಷರು.—ಪ್ರಶ್ನೆ ನಂ. 40 ಹಾಕುವುದಕ್ಕೆ ಶ್ರೀ ಕೆ. ಎಂ. ತಮ್ಮಯ್ಯನವರಿಗೆ ಅಪ್ಪಣೆ ಕೊಟ್ಟಿದ್ದೇನೆ.

Complaints against large scale Service Co-operative Society, Malkhed

40 Sri K. M. THAMMIAH (Kadur) [On behalf of Sri J. P. SARWESH (Sedam)].—

Will the Minister for Development be pleased to state :—

(*a*) the number of complaints received by the Deputy Registrar and Assistant Registrar, Gulbarga District regarding L. S. S. Co-operative Society, Malkhed, Sedam Taluk, Gulbarga District since 28th Spetmber 1965 ;